ಬಳ್ಳಾರಿ	19092
ರಾಯಚೂರು	23587
ಗುಲ್ಬರ್ಗಾ	27800
ಬೀದರ್	6502
ಒಟ್ಟು	**351671**

ಬೆಂಗಳೂರು ನಗರ ಕಾರ್ಪೋರೇಷನ್ ಕೌನ್ಸಿಲ್ ಹಾಲ್ ನಿರ್ಮಾಣಕ್ಕೆ ತಗುಲಿದ ವೆಚ್ಚ.

309-ಶ್ರೀ ಎಂ. ನಾರಾಯಣಸ್ವಾಮಿ (ಬೇತಮಂಗಲ) : ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಬೆಂಗಳೂರು ನಗರ ಕಾರ್ಪೋರೇಷನ್‌ನಿಂದ ನಿರ್ಮಿಸುತ್ತಿರುವ ಹೊಸ ಕೌನ್ಸಿಲ್ ಹಾಲ್ ನಿರ್ಮಾಣಕ್ಕೆ ತಗಲಿರುವ ಒಟ್ಟು ಹಣದ ವೆಚ್ಚವೆಷ್ಟು ?*

ಆ) *ಈಗ ಅದು ಯಾವ ಹಂತದಲ್ಲಿದೆ ಹಾಗೂ ಅದು ಯಾವಾಗ ಮುಗಿಯಲಿದೆ?*

ಇ) *ಈ ಹೊಸ ಕೌನ್ಸಿಲ್ ಹಾಲ್ ನಿರ್ಮಾಣ ಮಂದಗತಿಯಲ್ಲಿ ನಡೆಯಲು ಕಾರಣಗಳೇನು, ಹಾಗೂ ಅದರ ಬಗ್ಗೆ ತೆಗೆದುಕೊಂಡ ಕ್ರಮಗಳೇನು ?*

ಶ್ರೀ ಕೆ.ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು)

ಅ) ಅಂದಾಜು 300.00 ಲಕ್ಷ

ಆ) ಕೆಲಸವು ಪ್ರಗತಿಯಲ್ಲಿದ್ದು ಇನ್ನು ಆರು ತಿಂಗಳಲ್ಲಿ ಮುಗಿಯುಬಹುದೆಂದು ಉದ್ದೇಶಿಸಲಾಗಿದೆ.

ಇ) ಹೊಸ ಕೌನ್ಸಿಲ್ ಹಾಲ್ ನಿರ್ಮಾಣದ ನಿವೇಶನದಲ್ಲಿ ಹಾಲಿ ಇದ್ದ ಕಟ್ಟಡಗಳನ್ನು ಕೆಡವಿ ನಿವೇಶನವನ್ನು ಗುತ್ತಿಗೆದಾರರಿಗೆ ವಹಿಸಿಕೊಡುವುದರಲ್ಲಿ ಮತ್ತು ಹೊಸ ಕಟ್ಟಡವನ್ನು ಮೊದಲು ಕಟ್ಟಲು ಉದ್ದೇಶಿಸಲಾಗಿದ್ದ ಸ್ಥಳದಿಂದ 60 ಮೀ.ನಷ್ಟು ಸ್ಥಳಾಂತರಿಸಿದ್ದರಿಂದ ಪ್ರಾರಂಭದಲ್ಲಿ ಕೆಲಸವು ವಿಳಂಬವಾಗಿದೆ.

ಸಣ್ಣ ಉಳಿತಾಯ ಇಲಾಖೆಯವರ ಪ್ಯಾಕೆಟ್ ಕ್ಯಾಲೆಂಡರ್‌ಗಳ ಸಂಖ್ಯೆ.

310-ಶ್ರೀ ಎಂ. ನಾರಾಯಣ ಸ್ವಾಮಿ (ಬೇತಮಂಗಲ) : ಮಾನ್ಯ ಸಣ್ಣ ಉಳಿತಾಯ, ರಾಜ್ಯ ಲಾಟರಿ ಹಾಗೂ ವಿಮಾ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) *1992ನೇ ಜನವರಿಯಲ್ಲಿ ವಿತರಣೆ ಮಾಡಿದ ಸಣ್ಣ ಉಳಿತಾಯ ಪ್ಯಾಕೆಟ್ ಕ್ಯಾಲೆಂಡರುಗಳು ಮತ್ತು ಗೋಡೆಯ ಕ್ಯಾಲೆಂಡರುಗಳು ಒಟ್ಟು ಸಂಖ್ಯೆ ಎಷ್ಟು ?*

ಆ) *ಪ್ರತಿಗೋಡೆಯ ಕ್ಯಾಲೆಂಡರು ಮತ್ತು ಪ್ಯಾಕೆಟ್ ಕ್ಯಾಲೆಂಡರುಗಳಿಗೆ ತಗುಲಿದ ವೆಚ್ಚವೆಷ್ಟು ?*

ಇ) *ಈ ಕ್ಯಾಲೆಂಡರುಗಳನ್ನು ಎಲ್ಲಿ ಮುದ್ರಿಸಲಾಯಿತು ?*

ಈ) *ಈ ಕ್ಯಾಲೆಂಡರುಗಳನ್ನು ಸರ್ಕಾರಿ ಮುದ್ರಣಾಲಯದಲ್ಲಿ ಮುದ್ರಿಸದಿರುವ ಕಾರಣಗಳೇನು ?*

ಶ್ರೀ ಟಿ.ಎಂ. ಮಂಜುನಾಥ್ (ಸಣ್ಣ ಉಳಿತಾಯ, ರಾಜ್ಯ ಲಾಟರಿ ಹಾಗೂ ವಿಮಾ ರಾಜ್ಯ ಮಂತ್ರಿಗಳು) :

ಅ) ಪ್ಯಾಕೆಟ್ ಕ್ಯಾಲೆಂಡರು : ಮೂರು ಲಕ್ಷ (ಉಚಿತ ವಿತರಣೆ)

ಪ್ಯಾಕೆಟ್ ಕ್ಯಾಲೆಂಡರ್ : 25,000 (ರಿಯಾಯಿತಿ ದರ ರೂ 1 ರಂತೆ ಮಾರಾಟ) ಗೋಡೆ ಕ್ಯಾಲೆಂಡರು : 25,000

ಆ) ಪ್ಯಾಕೆಟ್ ಕ್ಯಾಲೆಂಡರು ರೂ. 1.87 ಪೈ (ಉಚಿತ ವಿತರಣೆ)

ಪ್ಯಾಕೆಟ್ ಕ್ಯಾಲೆಂಡರ್ (ರಿಯಾಯಿತ ದರ ರೂ. 1ರಂತೆ ಮಾರಾಟ ರೂ. 1.95 ಪೈ. ಗೋಡೆ ಕ್ಯಾಲೆಂಡರ್ : ರೂ. 7.50 ಪೈ.

ಇ) ಕರ್ನಾಟಕ ಸರ್ಕಾರದ ಉದ್ಯಮವಾದ ಮೆ : ಮಾರ್ಕೆಂಟಿಂಗ್ ಕನ್ಸ್ಲೆಂಟಿಂಟ್ ಅಂಡ್ ಏಜನ್ಸಿ ಲಿ. ಬೆಂಗಳೂರು, ಇವರಿಂದ ಮುದ್ರಿಸಿ ಪಡೆಯಲಾಯಿತು.

ಈ) ಡಿಸೆಂಬರ್-ಜನವರಿ ತಿಂಗಳುಗಳಲ್ಲಿ ಸರ್ಕಾರಿ ಮುದ್ರಣಾಲಯದಲ್ಲಿ ಸರ್ಕಾರಿ ಆದೇಶಗಳು ಆಯವ್ಯಯ ಅಂದಾಜುಗಳನ್ನು ಮುದ್ರಿಸಲಾಗುವುದು. ಈ ಹಿಂದೆ ಸರ್ಕಾರಿ ಮುದ್ರಣಾಲಯವು ಕ್ಯಾಲೆಂಡರುಗಳನ್ನು ಸಕಾಲದಲ್ಲಿ ಮುದ್ರಿಸದಿದ್ದುದರಿಂದ ಅವುಗಳನ್ನು ವಿತರಣೆ ಮಾಡುವುದು ಬಹಳ ವಿಳಂಬವಾಯಿತು. ಈ ಕ್ಯಾಲೆಂಡರುಗಳನ್ನು ಜನವರಿಯಲ್ಲಿಯೇ ವಿತರಣೆ ಮಾಡಬೇಕಾಗಿರುವುದರಿಂದ ಸರ್ಕಾರದ ಉದ್ಯಮವಾದ ಮೆ.ಮಾರ್ಕೆಟಿಂಗ್ ಕನ್ಸ್ಲೆಂಟಿಂಟ್ ಏಜನ್ಸೀಸ್ ನಿಯಮಿತ ಬೆಂಗಳೂರು, ಇವರಿಂದ ಮುದ್ರಿಸಲಾಯಿತು.

ರಾಜ್ಯದಲ್ಲಿ ಕೆಲಸ ಮಾಡುತ್ತಿರುವವರ ಐ.ಎ.ಎಸ್., /ಐ.ಪಿ.ಎಸ್ ಅಧಿಕಾರಿಗಳ ಹೆಸರುಗಳು

315-ಶ್ರೀ ಬಸವರಾಜ ರಾಯ ರೆಡ್ಡಿ (ಯಲಬುರ್ಗ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಕೆಲಸ ಮಾಡುತ್ತಿರುವ ಮೂಲತ ಕರ್ನಾಟಕ ವೃಂದಕ್ಕೆ ಸೇರಿದ ಐಎಎಸ್. ಐಪಿಎಸ್ ಅಧಿಕಾರಿಗಳ ಹೆಸರುಗಳು

ಆ) ಕರ್ನಾಟಕದ ವಿವಿಧ ಜಿಲ್ಲೆಗಳಲ್ಲಿ ಜಿಲ್ಲಾಧಿಕಾರಿ ಪೋಲೀಸು ಅಧೀಕ್ಷಕರಾಗಿ ಕೆಲಸ ನಿರ್ವಹಿಸುತ್ತಿರುವ ಮೂಲತಃ ಕರ್ನಾಟಕ ವೃಂದಕ್ಕೆ ಸೇರಿದ ಐಎಎಸ್ ಐಪಿಎಸ್ ಅಧಿಕಾರಿಗಳ ಹೆಸರುಗಳು

ಇ) ಯಾವುದೇ ಜಿಲ್ಲೆಗಳಲ್ಲಿಯೂ ಜಿಲ್ಲಾಧಿಕಾರಿ ಪೋಲೀಸು ಅಧೀಕ್ಷಕರಾಗಿ ಮೂಲತಃ ಕರ್ನಾಟಕಕ್ಕೆ ಸೇರಿದ ಐಎಎಸ್. ಐಪಿಎಸ್ ಅಧಿಕಾರಿಗಳು ಕೆಲಸ ನಿರ್ವಹಿಸುತ್ತಿಲ್ಲದಿರುವ ವಿಷಯವು ನಿಜವೇ ?

ಈ) ಜಿಲ್ಲೆಗಳಿಗೆ ಮೂಲತಃ ಕರ್ನಾಟಕಕ್ಕೆ ಸೇರಿದ ಐಎಎಸ್. ಐಪಿಎಸ್ ಅಧಿಕಾರಿಗಳನ್ನು ನೇಮಕ ಮಾಡಲು ಸರ್ಕಾರ ಕ್ರಮ ತೆಗೆದುಕೊಳ್ಳುವುದೇ?

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು) :

ಅ) ವಿವರಗಳನ್ನು ಅನುಬಂಧ-1ರಲ್ಲಿ ಸಲ್ಲಿಸಿದೆ.

ಆ) ವಿವರಗಳನ್ನು ಅನುಬಂಧ-2ರಲ್ಲಿ ಸಲ್ಲಿಸಿದೆ.

ಇ) ಇಲ್ಲ.

ಈ) ಪ್ರಶ್ನೆ (ಇ)ಗೆ ಉತ್ತರಿಸಿದ್ದರಿಂದ ಉದ್ಭವಿಸುವುದಿಲ್ಲ.